## ಕಳೆದ ಸಂಚಿಕೆಯಲ್ಲಿ



ಪಿತೃ ಪಿತಾಮಹರಿಗೆ ಎಡೆಯಿಡುವ 'ಹಿರಿಯರ ಹಬ್ಬ'ದಲ್ಲಿ ಬಂಧು ಮಿತ್ರರೆಲ್ಲ ಸೇರಿಕೊಂಡು ಕಲಕಲ ಎನ್ನುವ ಮನೆಯನ್ನು ನೋಡಿ ಜಗದೀಶರಿಗೆ ಹೃದಯ ತುಂಬಿ ಬಂತು. ಮನೆಮಂದಿ, ನಂಟರಿಷ್ಟರೆಲ್ಲ ಸೇರಲು ಹಬ್ಬವೊಂದು ನೆಪವಷ್ಟೇ. ಈ ಸಂಭ್ರಮವನ್ನು ಮನಸ್ಸಿನ ತುಂಬಾ ತುಂಬಿಕೊಂಡಿದ್ದ ಜಗದೀಶರನ್ನು ಅಕ್ಕನ ಮಾತು ವಾಸ್ತವಕ್ಕೆ ಎಳೆದು ತಂದಿತು. ಮನೆಯಲ್ಲಿನ ವಾರಗಿತ್ತಿಯರ ನಡುವಿನ ಜಗಳ ದೊಡ್ಡದಾಗುವ ಮೊದಲೇ, ಅಣ್ಣ ತಮ್ಮಂದಿರು ಪ್ರತ್ಯೇಕವಾಗಿ ವಾಸಿಸುವುದು ಒಳ್ಳೆಯದು ಎಂದು ಅಂಬಿಕಾ ಸಲಹೆ ನೀಡಿದಳು. ಅಕ್ಕನ ಮಾತು ಅಪಥ್ಯವಾಗಿ ಕಾಣಿಸಿದರೂ, ಶಾಂಭವಿ ಮತ್ತು ವಾರಿಜಾಳ ನಡುವೆ ವೈಮನಸ್ಸು ಬೆಳೆಯುತ್ತಿರುವುದು ಜಗದೀಶರ ಗಮನಕ್ಕೂ ಬಂದಿತ್ತು. ತನಗೊಂದು ಗಂಡು ಮಗುವಾದ ನಂತರ ವಾರಿಜಾಳ ನಡವಳಿಕೆ ಬದಲಾಗಿ, ಶಾಂಭವಿಯನ್ನು ಹಗುರವಾಗಿ ಕಾಣತೊಡಗಿದ್ದಳು. ಮನೆಯಲ್ಲಿನ ಈ ಬೆಳವಣಿಗೆಯ ಬಗ್ಗೆ ತಲೆಕೆಡಿಸಿಕೊಳ್ಳದ ಮಾದೇವ, ಪ್ರತ್ಯೇಕವಾಗುವ ಅಣ್ಣನ ಮಾತನ್ನು ಸಾರಾಸಗಟಾಗಿ ನಿರಾಕರಿಸಿ, ಎಲ್ಲವನ್ನೂ ಕ್ಷಮಿಸಿಕೊಂಡು ತೂಗಿಸಿಕೊಂಡು ಹೋಗುವಂತೆ ಅಣ್ಣನಿಗೆ ಸ್ಪಷ್ಟವಾಗಿ ಹೇಳಿದ.

ಯಾಕಾದರೂ ವೀರುನಾ ಮಾತು ಕೇಳಿ, ಅವನ ಹಟಕ್ಕೆ ಮಣಿದು ತಾನು ಅವನಿಗೆ ಹುಡುಗಿ ಡ್ರೆಸ್ ಮಾಡಬಾರದಿತ್ತು ಅಂತ ಸಾವಿರ ಸಲ ಅಂದುಕೊಂಡಿದ್ದಾಳೆ. ಒಂದೇ ಮನೆಯಲ್ಲಿದ್ದ ತಾವು ಈಗ ಬೇರೆ ಬೇರೆ ಆಗುತ್ತಿರುವುದು ಮೇನಕಳಿಗಂತೂ ತುಂಬಾ ದುಃಖವಾಗಿತ್ತು. ಹಾಗಾಗಿ ಅವಳೂ ಸಪ್ಪಗಿದ್ಳು. ಅವಳಿಗೆ ವೀರು ಅಂದ್ರೆ ಪಂಚಪ್ರಾಣ. ಸದಾ ತನ್ನ ಜೊತೆಯಲ್ಲಿಯೇ ಇರಿಸಿಕೊಂಡಿರುತ್ತಿದ್ದಳು. ರಾತ್ರಿ ಮಲಗುವಾಗಲೂ ತನ್ನ ಜೊತೆಯೇ ಮಲಗುತ್ತಿದ್ದ ವೀರು ಈಗ ಬೇರೆ ಮನೆಯಲ್ಲಿ ಅಂತ ನೆನೆದುಕೊಂಡೇ ವಿಲವಿಲ ಒದ್ದಾಡುತ್ತಿದ್ಳು. ಯಾರು ಬೇಸರ ಮಾಡಿಕೊಳ್ಳಲಿ, ಯಾರು ನೊಂದುಕೊಳ್ಳಲಿ, ಆ ಮನೆಯಂತೂ ಎರಡಾಗಿತ್ತು.

ಮನೆ ಬೇರೆ ಬೇರೆ ಆದ ಮೇಲೆ ಹೆಂಗಸರ ಮುನಿಸು ಸಣ್ಣ ಪುಟ್ಟ ಘರ್ಷಣೆಗಳೂ ಕಡಿಮೆಯಾಗಿದ್ದವು. ಅವರ ಮನೆಗೆ ಇವರು, ಇವರ ಮನೆಗೆ ಅವ್ರು ಓಡಾಡಿಕೊಂಡು, ಏನೂ ಆಗ್ಲೇ ಇಲ್ಲ ಅನ್ನೋ ಹಾಗೆ ಮಾತಾಡಿಕೊಂಡು ಮನದೊಳಗೆ ಎಷ್ಟೇ ವಿರಸ ಭಾವನೆಗಳಿದ್ರೂ ಮೇಲ್ನೋಟಕ್ಕೆ ಶಾಂಭವಿ ಹಾಗೂ ವಾರಿಜ ಚೆನ್ನಾಗಿದ್ದುಬಿಟ್ಟರು. ಅದನ್ನ ನೋಡಿ ಜಗದೀಶರು, ಮಾದು ಮನದೊಳಗೆ ನೋವಿದ್ರು ಮನೆಯಲ್ಲಿ ಶಾಂತಿ ನೆಲೆಸಿದ್ದರಿಂದ ಸಮಾಧಾನಗೊಂಡರು.

ಮಕ್ಕಳೆಲ್ಲಾ ದೊಡ್ಡವರಾಗುತ್ತಿದ್ದರು. ಬೇರೆ ಮನೆಗೆ ಬಂದರೂ ವೀರುಗೆ ಮಾತ್ರ ಹುಡುಗಿಯ ವೇಷ ಹಾಕುವ ಆಸೆ ಮಾತ್ರ ಕಡಿಮೆಯಾಗಿರಲಿಲ್ಲ. ಅಮ್ಮನಿಗೆ ಗೊತ್ತಾದರೆ ಬೈದು ಹೊಡೆದು ಮಾಡುತ್ತಾಳೆ ಅಂತ ಕದ್ದು ಮುಚ್ಚಿ ಹಾಕಿಕೊಂಡು ಖುಷಿಪಡುತ್ತಿದ್ದ. ಅಕ್ಕಂದಿರನ್ನ ಕಾಡಿ ಬೇಡಿ ಅಕ್ಕಂದಿರ ಕೋಣೆಯಲ್ಲಿ ತನಗಿಷ್ಟವಾದುದನ್ನು ಹಾಕಿಕೊಂಡು, ಅಮ್ಮ ಬರದಂತೆ ಕೋಣೆಯ ಬಾಗಿಲು ಹಾಕಿಕೊಂಡು ಮನದಣಿಯೇ ಆಡಿಕೊಂಡು ಇದ್ದುಬಿಡುತ್ತಿದ್ದ. ಇದು ವೇದ, ಭಾಮರಿಗೆ ಒಳ್ಳೆ ಇಕ್ಕಟ್ಟಿನ ಪರಿಸ್ಥಿತಿ ತಂದಿಟ್ಟಿತ್ತು. ಒಂದೆಡೆ ಪ್ರೀತಿಯ ತಮ್ಮ, ಪಾಪ ಆಸೆಪಡ್ತಾ ಇದ್ದಾನಲ್ಲ ಅಂತ ತಮ್ಮನಿಗೆ ಬಟ್ಟೆ ಕೊಟ್ಟು, ಸರ, ಬಳೆ ಹಾಕಿ ಅವನು ಥೇಟ್ ಹುಡುಗಿಯಂತೆಯೇ ಹಾವ–ಭಾವ ಮಾಡಿ ನಗಿಸುವುದನ್ನು ತಮಾಷೆಯಾಗಿ ತೆಗೆದುಕೊಳ್ಳುತ್ತಾ ಆಸ್ವಾದಿಸುತ್ತಿದ್ದರೆ, ಇದು ಅಮ್ಮನಿಗೆ ಗೊತ್ತಾಗಿ ತಮಗೆ ಪೂಜೆ ಗ್ಯಾರಂಟಿ ಅನ್ನೋ ಭಯ ಕೂಡ ಕಾಡಿ ಭಯದಿಂದ ವಿಹ್ವಲಗೊಳ್ಳುತ್ತಿದ್ದರು. ಆದರೂ ಈ ವೀರೂಗ್ಯಾಕೆ ಇಂಥ ವಿಚಿತ್ರ ಆಸೆ ಅಂತ ಬೇಸರಾನೂ ಮಾಡಿಕೊಳ್ಳುತ್ತಿದ್ದರು.

ಒಂದು ದಿನ ವಾರಿಜ ಮದುವೆಗೆ ಅಂತ ಮಾದು ಜೊತೆ ಹೊರಗೆ ಹೋಗಿದ್ದಳು. ಮನೆಯಲ್ಲಿ ವೀರು, ವೇದ, ಭಾಮ ಮೂರೇ ಜನ. ಆಗ ವೀರೂಗೆ ಹುಡುಗಿ ಬಟ್ಟೆ ಹಾಕಿಕೊಳ್ಳುವ ಉಮೇದು ಬಂದು ಬಿಡ್ತು. ಅಕ್ಕಂದಿರನ್ನು ಕಾಡಿ ಅವರ ಚೂಡಿದಾರವನ್ನು ಧರಿಸಿ ಮುಖಕ್ಕೆ ಮೇಕಪ್ ಮಾಡಿಕೊಂಡು ವೈಯಾರದಿಂದ ಹುಡುಗಿಯಂತೆಯೇ ಆಡತೊಡಗಿದಾಗ, ಅಕ್ಕಂದಿರಿಬ್ಬರೂ ಬಿದ್ದು ಬಿದ್ದು ನಗತೊಡಗಿದರು. ಅವನ ಹಾವಭಾವ, ಅವನ ವೇಷ, ಅವನು ಹುಡುಗ ಅನ್ನೋದೇ ಗೊತ್ತಾಗುವಂತಿರಲಿಲ್ಲ. ಹೊಸಬರು ನೋಡಿದರೆ ಅವನು ವೀರು ಅಂತ ಖಂಡಿತ ಗುರ್ತಿಸುತ್ತಿರಲಿಲ್ಲ, ಹಾಗಿತ್ತು ಅವನ ವೇಷ. ಆ ಆಟ ಹುಡುಗಾಟದಲ್ಲಿ ಮೂವರಿಗೂ ಹೊತ್ತು ಹೋಗಿದ್ದೇ ತಿಳಿಯಲಿಲ್ಲ. ಹಾಡು ಹಾಕಿಕೊಂಡು ಮೂವರು ಕುಣಿಯುತ್ತಿದ್ದರು. ಆ ಜೋಶ್‌ನಲ್ಲಿ ಅಪ್ಪ ಅಮ್ಮ ಮನೆಗೆ ಬಂದಿದ್ದು ಗೊತ್ತಾಗಲೇ ಇಲ್ಲ. ತನ್ನ ಮುದ್ದಿನ ಮಗನ ಅವತಾರವನ್ನು ನೋಡಿ ಅವನು ಹೆಣ್ಣಿನಂತೆ ವೈಯಾರದಿಂದ ಕುಣಿಯುತ್ತಿದ್ದನ್ನು ನೋಡಿ ವಾರಿಜಳ ಎದೆ ಒಡೆದುಹೋಯಿತು. ಅವಳನ್ನು ನೋಡಿ ಗಾಬರಿಯಿಂದ ಶಾಕ್ ಹೊಡೆದವರಂತೆ ನಿಂತು ಬಿಟ್ಟರು.

ಯಾವುದನ್ನು ಮಾಡಬೇಡ ಅನ್ನುತ್ತಿದ್ದೆನೋ ಅದನ್ನೇ ತಾನಿಲ್ಲದಾಗ ಮಾಡುತ್ತಿದ್ದಾನೆ ಅಂದರೆ, ಇದೇನು ಮೊದಲ ಸಲ ಅಲ್ಲ ಅವನು ಹೀಗೆ ಮಾಡುತ್ತಿರುವುದು. ಮಗನಿಗೆ ತನ್ನ ಮಾತಿನ ಮೇಲೆ ಗೌರವ ಇಲ್ವಾ... ತನಗೆ ಬೇಸರ ತರಿಸಬಾರದೆಂಬ ಸಾಮಾನ್ಯ ಪರಿಜ್ಞಾನವೂ ತನ್ನ ಮಗನಿಗೆ ಇಲ್ಲವೇ... ಈ ಹುಚ್ಚು ಆಸೆ ಯಾಕೆ ಅವನಿಗೆ? ಇದನ್ನ ಈಗಲೇ ಬಿಡಿಸದಿದ್ದರೆ ಮುಂದೆ ಇದನ್ನೇ ಅಭ್ಯಾಸ ಮಾಡಿಕೊಂಡು ಬಿಟ್ಟರೆ, ಜನ ತೊಡೆ ತಟ್ಟಿಕೊಂಡು ನಗುವುದಿಲ್ಲವೇ? ಅಪಹಾಸ್ಯ ಮಾಡಿ ಕುಹಕ ಪಡುವುದಿಲ್ಲವೇ? ಥೂ ಎಂತ ಹುಡುಗ ಇವ್ನು, ಈಗಲೇ ಈ ಚಟನಾ ಬಿಡುಸ್ಬೇಕು ಅಂತ ಅಂದುಕೊಂಡವಳೇ ಮಗನ ಬಳಿ ಬಂದು ಅವನು ಹಾಕಿರುವುದನ್ನೆಲ್ಲಾ ಕಿತ್ತು ಹಾಕಿ, 'ಯಾಕೋ ಇಂಗೆ ವೊಟ್ಟೆ ಉರುಸ್ತಿಯಾ... ನೀನು ಗಂಡು ಅನ್ನೋದನ್ನೇ ಮರ್ತುಬಿಡ್ತಿಯೇನೊ, ನಿಂಗ್ಯಾಕೊ ಇಂಥ ಹುಚ್ಚು ಆಸೆ, ಆ ಆಸೆ ಬಿಡುಸ್ತೀನಿ ಇರು' ಹಾಗೆಂದವಳೇ ಅವನನ್ನು ಅಡುಗೆ ಮನೆಗೆ ಕರೆದೊಯ್ದು ಮಗುಚುವ ಕೈಯನ್ನು ಗ್ಯಾಸ್ ಸ್ಟವ್ ಹೊತ್ತಿಸಿ ಅದರ ಮೇಲೆ ಇಟ್ಟು ಕೆಂಪಗೆ ಕಾಯಿಸಿ, ಅವನ ಎರಡೂ ಕೈಗಳ ಮೇಲೆ ಇಟ್ಟುಬಿಟ್ಟಳು. ಭಾಮ, ವೇದ, 'ಬೇಡ ಕಣಮ್ಮ, ಅವನಿಗೆ ಏನೂ ಮಾಡಬೇಡ' ಅಂತ ಅಳುತ್ತಾ ಗೋಗರೆಯುತ್ತಿದ್ದರೂ ಕೇಳದೆ ಕಠಿಣ ಮನಸ್ಸಿನಿಂದ ಮಗನಿಗೆ ಶಿಕ್ಷೆ ಕೊಟ್ಟುಬಿಟ್ಟಳು. ಕೈಗಳೆರಡೂ ಬೊಬ್ಬೆ ಬಂದರೂ ನಾನು ಹೀಗೆಲ್ಲ ಮಾಡಲ್ಲ ಅಂತ ವೀರೂ ಹೇಳಲೇ ಇಲ್ಲ. ಅಮ್ಮ ಉರಿ ಉರಿ ಅಂತ ಅಳ್ತಾ ಇದ್ದನೇ ಹೊರತು, 'ತಪ್ಪಾಯ್ತು, ಅಂಗೆಲ್ಲ ಮಾಡಲ್ಲ ಅಂತ ಹೇಳೊ' ಅಂತ ಅಕ್ಕಂದಿರು ಹೇಳಿಕೊಟ್ಟರೂ ಅವನು ಮಾತ್ರ ಹಾಗೆ ಹೇಳಲೇ ಇಲ್ಲ. ಅದು ವಾರಿಜಳಲ್ಲಿ ಮತ್ತಷ್ಟು ಕಿಚ್ಚು ಹೆಚ್ಚಿಸಿತು. ಕೈಯಿಂದ ಮಗುಚುವ ಕೈ ತೆಗೆದು ಕಾಲಿನ ಮೇಲೆ ಇಟ್ಟಳು. ಅಲ್ಲಿಯೂ ಬೊಬ್ಬೆ ಬಂದು ವೀರೂ ಕುಣಿದಾಡತೊಡಗಿದ. ಇನ್ನೂ ಎಲ್ಲೆಲ್ಲಿ ಸುಡುತ್ತಿದ್ದಳೊ. ಹೊರಗೆ ಇದ್ದ ಮಾದು ಮನೆಯಲ್ಲಿನ ಕಿರುಚಾಟ ಕೇಳಿ ಓಡಿಬಂದ. ಮಾದು ರಣಚಂಡಿಯಂತೆ ಕೈಯಲ್ಲಿ ಆಯುಧದಂತೆ ಮಗುಚುವ ಕೈ ಹಿಡಿದು ಮಗನನ್ನು ದಂಡಿಸುತ್ತಿದ್ದ ಹೆಂಡತಿಯನ್ನು ಕಂಡು ದಂಗು ಬಡಿದುಹೋದ. ಯಾವ ಅಪರಾಧಕ್ಕಾಗಿ ಮುದ್ದಿನ ಮಗನನ್ನು ಇಷ್ಟೊಂದು ಕ್ರೂರವಾಗಿ ದಂಡಿಸುತ್ತಿದ್ದಾಳೆ ಅಂತ ಅರ್ಥವಾಗದೆ ಹತ್ತಿರ ಬಂದು, ಅವಳ ಕೈಯಿಂದ ಮಗುಚುವ ಕೈಯನ್ನು ಕಿತ್ತೆಸೆದು ಮಗನ ಕೈ ಕಾಲುಗಳಲ್ಲಿ ಬೊಬ್ಬೆ ಬಂದಿದ್ದನ್ನು ನೋಡಿ ಆಘಾತಗೊಂಡ.

'ನೀಯೇನು ಮನುಷ್ಯಿನಾ, ರಾಕ್ಷಸಿನಾ, ಮಗೀಗೆ ಇಂಗೆ ಹಿಂಸೆ ಕೊಡ್ತಿದ್ದಿಯಲ್ಲ. ನೀಯೇನು ಅವನನ್ನು ಹೆತ್ತಿದ್ದೀಯಾ ಇಲ್ಲಾ ಕಕ್ಕಿದ್ದೀಯಾ, ನೀನೆಂತಾ ತಾಯೀನೆ' ಅಂದವನೇ, ಕೋಪದಿಂದ ಹೆಂಡತಿಯ ಕೆನ್ನೆಗೆ ಬಲವಾಗಿ ಹೊಡೆದುಬಿಟ್ಟ. ಆ ಏಟಿನ ರಭಸಕ್ಕೆ ಕೆಳಗೆ ಬಿದ್ದುಬಿಟ್ಟಳು ವಾರಿಜ. ಅಷ್ಟರೊಳಗೆ ಆಚೆ ಮನೆಯಿಂದ ಶಾಂಭವಿ, ಜಗದೀಶರು, ಮಕ್ಕಳು